[Govt. of Karnataka C.R.P. 67]

| Deposition Sheets (RP.No.57) Form No.4 (Civil) |
|---|

**IN THE COURT OF CIVIL JUDGE & J.M.F.C., KARKALA.**

**Criminal Case No. 969-2019**

**..................................................Vs.....................................**

ಸಾಕ್ಷಿದಾರನ ಹೆಸರು ಃ ಉದಯಕುಮಾರ್ ಶೆಟ್ಟಿ

ತಂದೆಯ ಹೆಸರುಃ ಸುಬ್ಬಣ್ಣ ಶೆಟ್ಟಿ ಪಿ.ಡಬ್ಲ್ಯೂಃ **1**

ಪ್ರಾಯ ಃ **53** ವರ್ಷ

ಉದ್ಯೋಗ ಃ ಹೆಚ್ ಸಿ **2189**, ಪಡುಬಿದ್ರೆ ಪೋಲಿಸ್ ಠಾಣೆ

ವಾಸ ಃ ಕಾರ್ಕಳ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ **15-03-2025**

ದಂ ಪ್ರ ಸಂ ಕಲಂ **299** ರಡಿಯಲ್ಲಿ ಸಾಕ್ಷಿಯ ಹೇಳಿಕೆಃ

ನಾನು ಅಕ್ಟೋಬರ್ **2015** ರಿಂದ ಜುಲೈ **2023** ರವರೆಗೆ ಕಾರ್ಕಳ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 27-06-2023 ರಂದು ಮಾನ್ಯ ನ್ಯಾಯಲಯದ ಸಿಸಿ ನಂ. 969/19 ರಲ್ಲಿ ಇಸ್ತಿಯಾರ್ ಮಹಜರಿನಂತೆ ಉದ್ಘೋಷಣಾ ವಾರೆಂಟ್ ಜಾರಿ ಮಾಡಲು ಹೆಚ್ ಸಿ 2189 ಉದಯಕುಮಾರ್ ಶೆಟ್ಟಿ ಆದ ನಾನು ಮಂಗಳೂರು ತಾಲೂಕು ತೆಂಕುಲೆಪಾಡಿ ಗ್ರಾಮದ ಅಡ್ಡೂರು, ಪುನಿಕೋಡಿ ಮನೆಗೆ ತಲುಪಿ ಸತೀಶ್ ಎಂಬುವವರ ಬಗ್ಗೆ ವಿಚಾರಿಸಲಾಗಿ ವಾಸ್ತವ್ಯ ಇರುವುದಿಲ್ಲ ಎಂದು ಕಂಡು ಬಂದಿದ್ದು ಸದರಿ ವಾರೆಂಟ್ ಆಸಾವಿ ಸತೀಶ್ ಕಂಡು ಬಂದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಸಿಸಿ ನಂ. 969/19 ರಲ್ಲಿ ದಿಃ 26-07-2023 ರಂದು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗುವಂತೆ ಮಂಗಳೂರು ತಾಲೂಕು, ಗಂಜಿಮಠ ಕೈಕಂಬ ತೆಂಕಳಿಪಾದೆ ಪರಸರದಲ್ಲಿ ಪಂಚರ ಸಮಕ್ಷಮ ಗ್ರಾಮ ಸಹಾಯಕರ ಸಹಾಯದಿಂದ ಗ್ರಾಮದಲ್ಲಿ ಟಾಂ ಟಾಂ ಬಾರಿಸಿ ಉದ್ಘೋಷಣಾ ವಾರೆಂಟ್ ನ ಪಂಚರ ಸಮಕ್ಷಮ ಒಂದು ಪ್ರತಿಯನ್ನು ಆರೋಪಿಯ ಮನೆಯ ಗೋಡೆಗೆ, ಇನ್ನೊಂದನ್ನು ಗಂಜಿಮಠ ಬಸ್ ನಿಲ್ದಾಣದ ಗೋಡೆಗೆ, ಒಂದು ಪ್ರತಿಯನ್ನು ಗಂಜಿಮಠ ಗ್ರಾಮ ಪಂಚಾಯತ್‌ನ ನಾಮಫಲಕಕ್ಕೆ

ಅಂಟಿಸಲಾಯಿತು. ಆತನು ಕಂಡು ಬಂದಲ್ಲಿ ಕಾರ್ಕಳ ಪೋಲಿಸ್ ಠಾಣೆಗೆ ಮಾಹಿತಿ ನೀಡಿ ಎಂದು ಸಾರ್ವಜನಿಕರಲ್ಲಿ ಮತ್ತು ರಿಕ್ಷಾ ಚಾಲಕರದಲ್ಲಿ ಕೋರಲಾಯಿತು. ಸದರಿ ಮಹಜರನ್ನು ದಿಃ 27-06-2023 ರಂದು 16.00 ಗಂಟೆಯಿದ 16.30 ಗಂಟೆಯವರೆಗೆ ತಯಾರಿಸಲಾಯಿತು. ಪಂಚರಾಗಿ ಇಸ್ಮಾಯಲ್ ಮಹಮ್ಮದ್ ಮತ್ತು ತಮ್ಮಯ್ಯ ರವರುಗಳ ಸಹಿ ಪಡೆಯಲಾಯಿತು. ನ್ಯಾಯಾಲಯದಿಂದ ನೀಡಿದ ಘೋಷಣಾ ವಾರೆಂಟನ್ನು ನಿಪಿ-1 ಎಂದು, ಇಸ್ತಿಯಾರ್ ಮಹಜರನ್ನು ನಿಪಿ-2 ಎಂದು, ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಆರೋಪಿಯು ತಲೆಮರೆಸಿಕೊಂಡಿದ್ದು, ಪಾಟೀ ಸವಾಲು ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ